# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಮೂರನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

**ಮಂಗಳವಾರ, ದಿನಾಂಕ:23ನೇ ಜುಲೈ, 2024**
**(ಸಮಯ: ಬೆಳಗ್ಗೆ 10.30 ಗಂಟೆಗೆ)**

* * *

## 01. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಆರನೆಯ ಪಟ್ಟಿ

ಆ) **ತಡೆಹಿಡಿಯಲಾದ ಪ್ರಶ್ನೆಗಳು:**

| | |
|---|---|
| 2ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 25(149) | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| 3ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀಮತಿ ಭಾರತಿ ಶೆಟ್ಟಿ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 42(338) | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |
| 3ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ಸಿ.ಎನ್. ಮಂಜೇಗೌಡ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 40(368) | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

ಇ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಆರನೆಯ ಪಟ್ಟಿ

## 02. ಶೂನ್ಯವೇಳೆ ಪ್ರಸ್ತಾವಗಳು

## 03. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಸಿದ್ದರಾಮಯ್ಯ (**ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು**) ಅವರು:–

**ಅ.** ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ(2024ರ ವರದಿ ಸಂಖ್ಯೆ–1)ಯನ್ನು ಸಭೆಯ ಮುಂದಿಡುವುದು.

..2..

**ಆ.** ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ(2024ರ ವರದಿ ಸಂಖ್ಯೆ-2)ಯನ್ನು ಸಭೆಯ ಮುಂದಿಡುವುದು.

## 04. ವಿತ್ತೀಯ ಕಾರ್ಯಕಲಾಪ

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)** ಅವರು:-

2024-25ನೇ ಸಾಲಿನ ಪೂರಕ ಅಂದಾಜು(ಮೊದಲನೆ ಕಂತು)ಗಳನ್ನು ಸಭೆಯ ಮುಂದಿಡುವುದು.

## 05. ವರದಿಯನ್ನೊಪ್ಪಿಸುವುದು

**ಶ್ರೀ ಟಿ.ಎನ್. ಜವರಾಯಿಗೌಡ (ಸದಸ್ಯರು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ)** ಅವರು 2023-24ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 39ನೇ ವರದಿಯನ್ನೊಪ್ಪಿಸುವುದು.

## 06. ಗಮನ ಸೆಳೆಯುವ ಸೂಚನೆಗಳು

೦1. **ಶ್ರೀಯುತರುಗಳಾದ ಸಿ.ಟಿ. ರವಿ, ಎನ್. ರವಿಕುಮಾರ್, ಛಲವಾದಿ ಟಿ. ನಾರಾಯಣಸ್ವಾಮಿ, ಪ್ರತಾಪ್ ಸಿಂಹ ನಾಯಕ್ ಕೆ., ಭಾರತಿ ಶೆಟ್ಟಿ, ಕೇಶವ ಪ್ರಸಾದ್ ಎಸ್ ಹಾಗೂ ಪಿ.ಹೆಚ್. ಪೂಜಾರ್** ಅವರುಗಳು ಪಶ್ಚಿಮಘಟ್ಟ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಉಂಟಾಗುತ್ತಿರುವ ಭೂಕುಸಿತಕ್ಕೆ ಕಾರಣಗಳೇನು ಎಂಬ ಕುರಿತು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಕ್ರಮವಹಿಸುವುದರ ಜೊತೆಗೆ ರಸ್ತೆ ಅಭಿವೃದ್ಧಿ/ನಿರ್ವಹಣೆ ಹಾಗೂ ಬೆಳೆ ಹಾನಿಗೆ ವಿಶೇಷ ಪ್ಯಾಕೇಜ್ ನಿಗದಿ ಮಾಡುವ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದು.

೦2. **ಶ್ರೀ ಮಧು ಜಿ. ಮಾದೇಗೌಡ** ಅವರು ಅರಣ್ಯ ಇಲಾಖೆಯಲ್ಲಿ 1994ರ ಪೂರ್ವದಲ್ಲಿ ನೇರ ನೇಮಕಾತಿ ಹುದ್ದೆಗಳ ಎದುರಾಗಿ ದ್ವಿತೀಯ ದರ್ಜೆ ಸಹಾಯಕರಿಂದ ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ "Promotion on purely temporary basis" ಎಂದು ಮುಂಬಡ್ತಿ ನೀಡಿದ್ದು, ಜೇಷ್ಠತೆಯಲ್ಲಿ ಪರಿಗಣಿಸುವ ಕುರಿತು ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರ ಗಮನ ಸೆಳೆಯುವುದು.

೦3. **ಶ್ರೀ ಮಂಜುನಾಥ್ ಭಂಡಾರಿ** ಅವರು ಕರಾವಳಿ ಹಾಗೂ ಮಲೆನಾಡಿನ ಸಾಂಸ್ಕೃತಿಕ ಕಲೆಯಾಗಿರುವ ಯಕ್ಷಗಾನವನ್ನು ಪ್ರೋತ್ಸಾಹಿಸಲು ಯಕ್ಷಗಾನ ಅಕಾಡೆಮಿಯನ್ನು ಮೇಲ್ದರ್ಜೆಗೇರಿಸಿ ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಅನುದಾನವನ್ನು ಒದಗಿಸುವ ಕುರಿತು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯುವುದು.

**07. ನಿಯಮ 330ರ ಮೇರೆಗೆ**

01. **ಶ್ರೀಯುತರುಗಳಾದ ಸಿ.ಟಿ. ರವಿ, ಶಶೀಲ್ ಜಿ. ನಮೋಶಿ, ಎನ್. ರವಿಕುಮಾರ್, ಎಸ್.ವ್ಹಿ. ಸಂಕನೂರ, ಛಲವಾದಿ ಟಿ. ನಾರಾಯಣಸ್ವಾಮಿ, ಕೇಶವ ಪ್ರಸಾದ್ ಎಸ್ ಹಾಗೂ ಕೆ.ಎಸ್. ನವೀನ್** ಅವರುಗಳು ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಒಳಗೊಂಡಂತೆ ದೈನಂದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡ ಹಾಗೂ ಮಧ್ಯಮ ವರ್ಗದವರ ಆರ್ಥಿಕ ಸ್ಥಿತಿ ಶೋಚನಿಯವಾಗಿರುವ ಕುರಿತು ಪ್ರಸ್ತಾಪಿಸುವುದು.

02. **ಶ್ರೀ ಎಂ.ಎಲ್. ಅನಿಲ್ ಕುಮಾರ್** ಅವರು ಭೂರಹಿತರಿಗೆ ಹಾಗೂ ಬಡರೈತರಿಗೆ ಸರ್ಕಾರ ನೀಡಿರುವ ಭೂಮಿಗೆ ಪಹಣಿಯಲ್ಲಿ ಪಿ.ನಂ. ನಮೂದಿಸದಿರುವುದರಿಂದ ಹಾಗೂ ಸದರಿ ಭೂಮಿಯನ್ನು ಇತರರಿಗೆ ಪರಭಾರೆ ಮಾಡಲು ವಿಧಿಸಿರುವ ನಿರ್ಬಂಧವನ್ನು ಸಡಿಲಿಸದೆ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವ ಕುರಿತು ಪ್ರಸ್ತಾಪಿಸುವುದು.

03. **ಶ್ರೀ ಯು.ಬಿ. ವೆಂಕಟೇಶ್** ಅವರು ಯುನೋಕಾಯಿನ್ ಟೆಕ್ನಲಾಜೀಸ್ ಕಂಪನಿ ಸರ್ವರ್ ಹ್ಯಾಕ್ ಮಾಡಿ ಕೋಟ್ಯಾಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್ ಕಳ್ಳತನ ಮಾಡಿದ ಸಂಘಟಿತ ಕೃತ್ಯದಲ್ಲಿನ ಆಪಾದಿತರು ಮತ್ತು ಹಗರಣದ ಬಗ್ಗೆ ಪ್ರಗತಿಯಲ್ಲಿರುವ ಸಿ.ಐ.ಡಿ. ವಿಚಾರಣೆ ಮತ್ತು ವರದಿ ಕುರಿತು ಪ್ರಸ್ತಾಪಿಸುವುದು.

04 **ಶ್ರೀ ಪಿ.ಹೆಚ್. ಪೂಜಾರ್ ಹಾಗೂ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರುಗಳು ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸುವುದು.

05 **ಶ್ರೀಯುತರುಗಳಾದ ಡಾ: ಧನಂಜಯ ಸರ್ಜಿ, ಶ್ರೀ ಎಸ್.ವ್ಹಿ. ಸಂಕನೂರ, ಕೆ.ಎ. ತಿಪ್ಪೇಸ್ವಾಮಿ, ಶಶೀಲ್ ಜಿ. ನಮೋಶಿ, ಗೋವಿಂದರಾಜು ಹಾಗೂ ಡಾ: ತಳವಾರ್ ಸಾಬಣ್ಣ** ಅವರುಗಳು ರಾಜ್ಯಾದ್ಯಂತ ಡೆಂಗ್ಯೂ ಖಾಯಿಲೆ ವ್ಯಾಪಕವಾಗಿ ಹರಡುತ್ತಿದ್ದು, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಪ್ರಸ್ತಾಪಿಸುವುದು.

06 **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ದೇವನಹಳ್ಳಿ ತಾಲ್ಲೂಕು ಹರಳೂರಿನಲ್ಲಿ ಕೆಐಎಡಿಬಿ ಅಭಿವೃದ್ಧಿ ಪಡಿಸಿರುವ ಹೈಟೆಕ್ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್‌ನ 2ನೇ ಹಂತದಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಮೆ: ಸೆಂಟರ್ ಫಾರ್ ಎಜುಕೇಷನ್ ಅಂಡ್ ಸೋಷಿಯಲ್ ಸ್ಟಡೀಸ್ ರವರಿಗೆ 116.16 ಎಕರೆ ಜಮೀನನ್ನು 99 ವರ್ಷದ ಗುತ್ತಿಗೆಗೆ ಶೈಕ್ಷಣಿಕ ಅಭಿವೃದ್ಧಿ/ವಿಶ್ವವಿದ್ಯಾಲಯ ಆರಂಭಕ್ಕೆ ಕ್ಯಾಬಿನೆಟ್ ಅನುಮತಿ ನೀಡಿರುವುದರ ಬದಲಾಗಿ 10 ವರ್ಷಗಳ ಗುತ್ತಿಗೆ ಕಮ್ ಮಾರಾಟ ಮಾಡುವ ಕುರಿತು ಪ್ರಸ್ತಾಪಿಸುವುದು.

4..

## 08. ಅರ್ಧ ಗಂಟೆ ಕಾಲಾವಧಿ ಚರ್ಚೆ

ಅ. ರಾಜ್ಯದ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಯಿಂದ ಉಂಟಾದ ಅನ್ಯಾಯದ ಬಗ್ಗೆ ದಿನಾಂಕ:15.07.2024ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:04(54)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಐವನ್ ಡಿ'ಸೋಜಾ** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ವಿತರಿಸಿದ ವಸ್ತುಗಳ ಕುರಿತು ದಿನಾಂಕ:15.07.2024ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:06(21)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಎನ್. ರವಿಕುಮಾರ್** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಇ. ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಕರ ಕೊರತೆ ಕುರಿತು ದಿನಾಂಕ:15.07.2024ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:09(61)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಡಾ: ತಳವಾರ್ ಸಾಬಣ್ಣ** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಈ. ಕೊಡಗು ಜಿಲ್ಲೆಯ ಪ್ರವಾಸೋದ್ಯಮವನ್ನು ಉತ್ತೇಜಿಸುವ ಕುರಿತು ದಿನಾಂಕ:18.07.2024ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:32(331)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಕುಶಾಲಪ್ಪ ಎಂ.ಪಿ(ಸುಜಾ)** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

ಉ. ರಾಜ್ಯದ ನೇಕಾರರ ಕುರಿತು ದಿನಾಂಕ:16.07.2024ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:22(233)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಕೇಶವ ಪ್ರಸಾದ್ ಎಸ್** ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

**ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.**

**www.kla.kar.nic.in/council/council.htm**